**CCE PF**
**CCE PR**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2017

**S. S. L. C. EXAMINATION, MARCH / APRIL, 2017**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 07. 04. 2017 ] ಸಂಕೇತ ಸಂಖ್ಯೆ : **83-K (Phy.)**

Date : 07. 04. 2017 ] CODE NO. : **83-K (Phy.)**

## ವಿಷಯ : ವಿಜ್ಞಾನ

## Subject : SCIENCE

(ಭೌತಶಾಸ್ತ್ರ / Physics)


(ಕನ್ನಡ ಭಾಷಾಂತರ / Kannada Version)

(ಹೊಸ ಪಠ್ಯಕ್ರಮ / New Syllabus)

(ಖಾಸಗಿ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh + Private Repeater)

[ ಗರಿಷ್ಠ ಅಂಕಗಳು : 100

[ Max. Marks : 100

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 1. | ಫೋಟೋ ವೋಲ್ಟೈಕ್ ಪರಿಣಾಮದ ತತ್ವವನ್ನು ಆಧರಿಸಿರುವ ಶಕ್ತಿಪರಿವರ್ತನೆ ಎಂದರೆ<br>*ಉತ್ತರ :* (C) — ಸೌರಶಕ್ತಿಯಿಂದ ವಿದ್ಯುತ್‌ಶಕ್ತಿ | 1 |
| 4. | ವಿಮಾನಗಳ ಪಥವನ್ನು ನಿರ್ದೇಶಿಸಲು ಬಳಸುವ ತಂತ್ರ<br>*ಉತ್ತರ :* (D) — ರೇಡಾರ್ | 1 |
| 7. | ಒಂದು ಡಯೋಡನ್ನು ಚಿತ್ರದಲ್ಲಿ ತೋರಿಸಿರುವಂತೆ ವಿದ್ಯುನ್ಮಂಡಲದಲ್ಲಿ ಜೋಡಿಸಲಾಗಿದೆ. ಈ ಚಿತ್ರಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ<br><br>*ಉತ್ತರ :* (A) — ಡಯೋಡ್ ಅಧಿಕ ರೋಧವನ್ನು ಒಡ್ಡುತ್ತದೆ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| 11. | *A*-ಪಟ್ಟಿಯಲ್ಲಿ ಸಾಧನಗಳ ಹೆಸರುಗಳನ್ನು *B*-ಪಟ್ಟಿಯಲ್ಲಿ ಅವುಗಳ ಅನ್ವಯಗಳನ್ನು ನೀಡಲಾಗಿದೆ. ಅವುಗಳನ್ನು ಹೊಂದಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : | | |
| | ***ಉತ್ತರ :*** | | |
| | (A) — (iv) ಉಷ್ಣ ವಿದ್ಯುದಾಗಾರಗಳಲ್ಲಿ ಪರ್ಯಾಯಿ ವಿದ್ಯುತ್ಪ್ರವಾಹ ಉತ್ಪಾದಿಸಲು | 1 | |
| | (B) — (i) ಎ.ಸಿ. ಯ ವೋಲ್ಟತೆಯನ್ನು ಹೆಚ್ಚಿಸಿ ದೂರದ ಸ್ಥಳಗಳಿಗೆ ರವಾನಿಸಲು | 1 | |
| | (C) — (vii) ಮಕ್ಕಳ ಆಟಿಕೆ, ಟೇಪ್‌ರೆಕಾರ್ಡರ್ ಇತ್ಯಾದಿ ಸಾಧನಗಳಲ್ಲಿ | 1 | |
| | (D) — (iii) ವಿಸರ್ಜನಾ ನಳಿಕೆ ಪ್ರಯೋಗಗಳಲ್ಲಿ ಕಡಿಮೆ ವೋಲ್ಟತೆಯ ಡಿ.ಸಿ. ಯಿಂದ ಅತಿ ಹೆಚ್ಚಿನ ವೋಲ್ಟತೆಯನ್ನು ಪಡೆಯಲು | 1 | 4 |
| 12. | ಭೂಗರ್ಭ ಉಷ್ಣಶಕ್ತಿ ಎಂದರೇನು ? | | |
| | ***ಉತ್ತರ :*** | | |
| | ಭೂಮಿಯ ಮೇಲ್ಮೈಯಿಂದ 10 ಕಿ.ಮೀ. ಆಳದವರೆಗಿನ ವ್ಯಾಪ್ತಿಯಲ್ಲಿ ಹುದುಗಿರುವ ಶಕ್ತಿ. | | 1 |
| 19. | '*A*' ಎಂಬ ಹುಡುಗನು ಬೆಳಕಿನ ಅಲೆಯು ಅಡ್ಡ ತರಂಗ ಎಂದು ವಾದಿಸುತ್ತಾನೆ. '*B*' ಎಂಬ ಹುಡುಗನು ಅದು ವಿದ್ಯುತ್ಕಾಂತೀಯ ತರಂಗ ಎಂದು ವಾದಿಸುತ್ತಾನೆ. ಯಾರ ವಾದ ಸರಿಯಾಗಿದೆ ? ನಿಮ್ಮ ಉತ್ತರವನ್ನು ವೈಜ್ಞಾನಿಕವಾಗಿ ಸಮರ್ಥಿಸಿ. | | |
| | ***ಉತ್ತರ :*** | | |
| | ಇಬ್ಬರ ವಾದವೂ ಸರಿಯಾಗಿದೆ. | 1 | |
| | ಏಕೆಂದರೆ, ಬೆಳಕಿನ ಅಲೆಗಳು ವಿದ್ಯುತ್ ಕ್ಷೇತ್ರ ಮತ್ತು ಕಾಂತಕ್ಷೇತ್ರದ ಕಂಪನಗಳನ್ನೊಳಗೊಂಡಿವೆ. / ಈ ತರಂಗಗಳ ಪ್ರಸರಣಕ್ಕೆ ಯಾವುದೇ ಮಾಧ್ಯಮ ಬೇಕಿಲ್ಲ. (ಯಾವುದಾದರೂ ಒಂದು) | ½ | |
| | ಬೆಳಕು ಅಡ್ಡ ತರಂಗ ಏಕೆಂದರೆ ಮಾಧ್ಯಮ ಕಣಗಳು ತರಂಗದ ಚಲನೆಯ ದಿಕ್ಕಿಗೆ ಲಂಬವಾಗಿ ಕಂಪಿಸುತ್ತವೆ. | ½ | 2 |
| 22. | ಡೀಸಲ್ ಇಂಜಿನ್ ಮತ್ತು ಪೆಟ್ರೋಲ್ ಇಂಜಿನ್‌ಗಳಿಗಿರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ. | | |
| | **ಅಥವಾ** | | |
| | ಅಂತರ್ದಹನ ಇಂಜಿನ್ನುಗಳು ಹಬೆ ಇಂಜಿನ್ನುಗಳಿಗಿಂತ ಅನುಕೂಲಕರ ಎಂದು ನಿರ್ಧರಿಸಲು ಯಾವುದಾದರೂ ನಾಲ್ಕು ಕಾರಣಗಳನ್ನು ಕೊಡಿ. | | |
| | ***ಉತ್ತರ :*** | | |
| | *ಡೀಸಲ್ ಇಂಜಿನ್ :* | | |
| | i) ಕಿಡಿಬೆಣೆ ಅಗತ್ಯವಿಲ್ಲ | | |
| | ii) ಡೀಸಲ್ ಇಂಧನವಾಗಿರುತ್ತದೆ | | |
| | iii) ಸ್ಥಿರ ಒತ್ತಡದಲ್ಲಿ ಅನಿಲಗಳು ವ್ಯಾಕೋಚಿಸುತ್ತವೆ | | |
| | iv) ದಕ್ಷತೆ ಹೆಚ್ಚು | | |
| | v) ಮಾಲಿನ್ಯದ ತೀವ್ರತೆ ಹೆಚ್ಚು | | |
| | vi) ಅಗ್ಗ | | |
| | vii) ಕಾರ್ಬೊರೇಟರ್ ಇಲ್ಲ | | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

*ಪೆಟ್ರೋಲ್ ಇಂಜಿನ್ :*

i) ಕಿಡಿಬೆಣೆ ಅಗತ್ಯವಾಗಿದೆ

ii) ಪೆಟ್ರೋಲ್ ಇಂಧನವಾಗಿದೆ

iii) ತಕ್ಷಣ ಉಂಟಾಗುವ ಒತ್ತಡದಿಂದ ಅನಿಲಗಳು ವ್ಯಾಕೋಚಿಸುತ್ತವೆ

iv) ದಕ್ಷತೆ ಕಡಿಮೆ

v) ಮಾಲಿನ್ಯದ ತೀವ್ರತೆ ಕಡಿಮೆ

vi) ದುಬಾರಿ

vii) ಕಾರ್ಬೋರೇಟರ್ ಇದೆ (ಯಾವುದಾದರೂ ಎರಡು ಮಾತ್ರ) 1 + 1

***ಅಥವಾ***

ಅಂತರ್ದಹನ ಇಂಜಿನ್ನುಗಳ —

i) ದಕ್ಷತೆ ಹೆಚ್ಚು

ii) ತಕ್ಷಣ ಚಾಲೂ ಮಾಡಬಹುದು

iii) ಚಿಕ್ಕ ಗಾತ್ರದಲ್ಲೂ ತಯಾರಿಸಬಹುದು

iv) ಚಿಕ್ಕ / ದೊಡ್ಡ ಎಲ್ಲಾ ಯಂತ್ರಗಳಲ್ಲೂ ಬಳಸಬಹುದು

v) ಸ್ಫೋಟಿಸುವ ಭಯವಿಲ್ಲ

vi) ಇಂಧನದ ಅಪವ್ಯಯ ಕಡಿಮೆ (ಯಾವುದಾದರೂ ನಾಲ್ಕು ಮಾತ್ರ) 4 × ½ — 2

25. ಒಬ್ಬ ಮನುಷ್ಯನು ಬೆಟ್ಟ '*A*' ಮತ್ತು ಬೆಟ್ಟ '*B*' ಗಳ ನಡುವೆ ನಿಂತು ಜೋರಾಗಿ ಚಪ್ಪಾಳೆ ತಟ್ಟುತ್ತಾನೆ. '*A*' ಬೆಟ್ಟದಿಂದ ಪ್ರತಿಧ್ವನಿಯನ್ನು 4 ಸೆಕೆಂಡುಗಳ ನಂತರ ಮತ್ತು '*B*' ಬೆಟ್ಟದಿಂದ 6 ಸೆಕೆಂಡುಗಳ ನಂತರ ಕೇಳಿಸಿಕೊಳ್ಳುತ್ತಾನೆ. ಗಾಳಿಯಲ್ಲಿ ಶಬ್ದದ ವೇಗ 340 $ms^{-1}$ ಆದರೆ, ಎರಡು ಬೆಟ್ಟಗಳ ನಡುವಿನ ದೂರವನ್ನು ಲೆಕ್ಕಾಚಾರ ಮಾಡಿ.

***ಉತ್ತರ :***

$A$ ಯಿಂದ ಇರುವ ದೂರ $d_1 = \frac{v \times t_1}{2} = \frac{340 \times 4}{2} = 680$ ಮೀ. ½

$B$ ಯಿಂದ ಇರುವ ದೂರ $d_2 = \frac{v \times t_2}{2} = \frac{340 \times 6}{2} = 1020$ ಮೀ. ½

$\therefore$ $A$ ಯಿಂದ $B$ ಗೆ ಇರುವ ದೂರ $= d_1 + d_2$

$= 680 + 1020$

$= 1700$ ಮೀ. 1 — 2

***ಅಥವಾ***

ಶಬ್ದವು ಚಲಿಸಿದ ಒಟ್ಟು ಕಾಲ $t = t_1 + t_2$

$= 4 + 6$

$= 10$ ಸೆಕೆಂಡ್ 1

$\therefore$ $A$ ಯಿಂದ $B$ ಗೆ ಇರುವ ದೂರ $= \frac{v \times t}{2}$


$= \frac{340 \times 10}{2}$

$= 1700$ ಮೀ. 1 — 2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

28. ಹಬೆ ಇಂಜಿನ್ನಿನ ವ್ಯಾಕೋಚಕ ಹೊಡೆತವನ್ನು ತೋರಿಸುವ ಚಿತ್ರವನ್ನು ಬರೆಯಿರಿ.

*ಉತ್ತರ :*



2

31. ಅತಿವಾಹಕತೆ ಎಂದರೇನು ? ಅತಿವಾಹಕಗಳ ಯಾವುದಾದರೂ ಎರಡು ಉಪಯೋಗಗಳನ್ನು ತಿಳಿಸಿ.

*ಅಥವಾ*

ಟ್ರಾನ್ಸಿಸ್ಟರ್ ಎಂದರೇನು ? ಟ್ರಾನ್ಸಿಸ್ಟರಿನ ಯಾವುದಾದರೂ ಎರಡು ಅನ್ವಯಗಳನ್ನು ತಿಳಿಸಿ.

*ಉತ್ತರ :*

ತೀರಾ ಕನಿಷ್ಠ ತಾಪಮಾನದಲ್ಲಿ ಕೆಲವೊಂದು ವಸ್ತುಗಳ ರೋಧವು ಅತ್ಯಲ್ಪ ಪ್ರಮಾಣವನ್ನು ಹೊಂದುವ ವಿದ್ಯಮಾನ. 1


*ಉಪಯೋಗ :* i) ಶಕ್ತಿಯುತ ಕಾಂತಗಳಲ್ಲಿ

ii) ಮೈಕ್ರೋವೇವ್ ಉಪಕರಣಗಳಲ್ಲಿ

iii) ಕಾಂತೀಯ ಅನುರಣನ ಬಿಂಬದಲ್ಲಿ ( MRI )

(ಯಾವುದಾದರೂ ಎರಡು ಮಾತ್ರ) ½ + ½ 2

*ಅಥವಾ*

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| | ಮೂರು ತುದಿಗಳಿರುವ ವಿಶೇಷವಾಗಿ ರಚಿಸಿರುವ ಅರೆವಾಹಕ ಸಾಧನ. | 1 | |
| | *ಉಪಯೋಗ :* i) ಪ್ರವರ್ಧಕಗಳಲ್ಲಿ<br>ii) ಆಸಿಲೇಟರ್‌ಗಳಲ್ಲಿ<br>iii) ಸ್ವಿಚಿಂಗ್ ಮಂಡಲಗಳಲ್ಲಿ<br>(ಯಾವುದಾದರೂ ಎರಡು ಮಾತ್ರ) | ½ + ½ | 2 |
| 35. | ಪೆಟ್ರೋಲ್ ಇಂಜಿನ್ನಿನ ಕಾರ್ಯವಿಧಾನದ ನಾಲ್ಕು ಹಂತಗಳನ್ನು ತಿಳಿಸಿ.<br>*ಉತ್ತರ :*<br>i) ಭುಕ್ತಿ ಹೊಡೆತ<br>ii) ಸಂಪೀಡನಾ ಹೊಡೆತ<br>iii) ವ್ಯಾಕೋಚಕ ಹೊಡೆತ<br>iv) ನಿಷ್ಕಾಸ ಹೊಡೆತ | 4 × ½ | 2 |
| 38. | ಡಿ.ಸಿ. ಡೈನಮೋದ ಚಿತ್ರವನ್ನು ಬರೆಯಿರಿ.<br>*ಉತ್ತರ :*<br><br> | | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

41. ಕಕ್ಷಾವೇಗ ಎಂದರೇನು ? ಕಕ್ಷಾವೇಗಕ್ಕೂ ವಿಮೋಚನಾವೇಗಕ್ಕೂ ಇರುವ ಸಂಬಂಧವನ್ನು ಬರೆಯಿರಿ.

*ಉತ್ತರ :*

ಕಕ್ಷಾವೇಗ – ವೃತ್ತಾಕಾರದ ಪಥದಲ್ಲಿ ಚಲಿಸುತ್ತಿರುವ ಕಾಯದ ವೇಗ. 1

ವಿಮೋಚನಾ ವೇಗ = $\sqrt{2}$ . ಕಕ್ಷಾವೇಗ

$$v_e = \sqrt{2} \, . \, v_o .$$ 1


2

45. ನ್ಯೂಕ್ಲೀಯ ವಿದ್ಯುತ್ ಕ್ರಿಯಾಕಾರಿಯ ಚಿತ್ರವನ್ನು ಬರೆದು, ಈ ಕೆಳಗಿನ ಭಾಗಗಳನ್ನು ಗುರುತಿಸಿ :

(a) ಪ್ರತಿಫಲಕ

(b) ಉಷ್ಣ ವಿನಿಮಯಕಾರಿ

*ಉತ್ತರ :*




ಚಿತ್ರಕ್ಕೆ 2

ಎರಡು ಭಾಗಗಳಿಗೆ ½ + ½ 3

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 50. | (a) ಸೂರ್ಯನಂತಹ ನಕ್ಷತ್ರದ ವಿಕಾಸದ ಹಂತಗಳನ್ನು ಬರೆಯಿರಿ. ಕೊನೆಯ ಹಂತವನ್ನು ವಿವರಿಸಿ.<br>(b) ರಾಕೆಟ್‌ಗಳು ಇಂಧನದ ಜೊತೆ ಆಕ್ಸಿಡಕವನ್ನೂ ತಮ್ಮ ಜೊತೆ ಒಯ್ಯಬೇಕಾಗುತ್ತದೆ. ಏಕೆ ?<br>*ಅಥವಾ*<br>(a) ಬಿಗ್ ಬ್ಯಾಂಗ್ ಸಿದ್ಧಾಂತವನ್ನು ವಿವರಿಸಿ.<br>(b) ಭೂಸ್ಥಿರ ಉಪಗ್ರಹಗಳು ಎಂದರೇನು ? ಅವುಗಳನ್ನು ಸಂಪರ್ಕ ಉಪಗ್ರಹಗಳು ಎನ್ನಲು ಕಾರಣವೇನು ?<br>***ಉತ್ತರ :***<br>a) i) ಆದಿನಕ್ಷತ್ರ (ಪ್ರೊಟೋಸ್ಟಾರ್)<br>ii) ಸಮಸ್ಥಿತಿ<br>iii) ಕೆಂಪು ದೈತ್ಯ<br>iv) ಶ್ವೇತ ಕುಬ್ಜ 4 × ½<br>*ಶ್ವೇತ ಕುಬ್ಜ :*<br>i) ನಕ್ಷತ್ರವು ತನ್ನ ಹೊರಕವಚವನ್ನು ಕಳೆದುಕೊಂಡ ನಂತರ ತನ್ನದೇ ಗುರುತ್ವದಿಂದ ಕುಸಿಯ ತೊಡಗುತ್ತದೆ. ½<br>ii) ತಾಪವು ಅತಿ ಹೆಚ್ಚಾದಾಗ ನಕ್ಷತ್ರವು ಅಧಿಕ ಆವರ್ತವುಳ್ಳ ಕಿರಣಗಳನ್ನು ಸೂಸಿ ಶ್ವೇತ ಕುಬ್ಜವಾಗುತ್ತದೆ. ½<br>b) ರಾಕೆಟ್‌ಗಳು ವ್ಯೋಮದ ಹೊರವಲಯದಲ್ಲೂ (ನಿರ್ವಾತ) ಕಾರ್ಯ ನಿರ್ವಹಿಸಬೇಕಾಗಿರುವುದರಿಂದ, ಅಲ್ಲಿ ಆಮ್ಲಜನಕ ಲಭ್ಯತೆ ಇಲ್ಲದಿರುವುದರಿಂದ. / ಇಂಧನದ ದಹನ ಕ್ರಿಯೆಗೆ ಅನುಕೂಲವಾಗಲು. 1<br>*ಅಥವಾ*<br>ಬಿಗ್ ಬ್ಯಾಂಗ್ ಸಿದ್ಧಾಂತ :<br>a) ವಿಶ್ವದ ಆರಂಭದಲ್ಲಿ ಗೆಲಕ್ಸಿ, ನಕ್ಷತ್ರಗಳಲ್ಲಿರುವ ಸಮಸ್ತ ದ್ರವ್ಯ ಮತ್ತು ವಿಕಿರಣಗಳು ಬೆಂಕಿಯುಂಡೆಯೋಪಾದಿಯಲ್ಲಿ ಸಂಪೀಡನಗೊಂಡಿದ್ದು, ಅದನ್ನು 'ಪರಮಾದಿ ಅಗ್ನಿಗೋಲ' ಎನ್ನುತ್ತಾರೆ. 1<br>ಈ ಬೆಂಕಿಯುಂಡೆ ಭಾರೀ ಭೀಷಣವಾಗಿ ಸ್ಫೋಟಿಸಿದ್ದರಿಂದ ಅದರಲ್ಲಿರುವ ಪದಾರ್ಥಗಳು ಅತ್ಯಧಿಕ ವೇಗದಿಂದ ಹೊರಕ್ಕೆಸೆತಗೊಂಡಿತು. ಅಂದಿನಿಂದ ವಿಶ್ವದಲ್ಲಿ ಎಲ್ಲವೂ ಒಂದು ಮತ್ತೊಂದರಿಂದ ದೂರ ಸರಿಯುತ್ತಿವೆ. 1 | 4 |

| ಪ್ರಶ್ನೆ ಸಂಖ್ಯೆ | | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|---|
| | b) | ಸಮಭಾಜಕ ವೃತ್ತದ ಮೇಲೆ ನಿರ್ದಿಷ್ಟ ಎತ್ತರದಲ್ಲಿ ಭೂಮಿಗೆ ಸಾಪೇಕ್ಷವಾಗಿ ಸ್ಥಿರ ಸ್ಥಾನದಲ್ಲಿ ಉಳಿಯಬಲ್ಲ ಕೃತಕ ಉಪಗ್ರಹಗಳು.<br>**ಅಥವಾ**<br>ಉಪಗ್ರಹಗಳ ಪರಿಭ್ರಮಣ ಅವಧಿ ಭೂಮಿಯ ಭ್ರಮಣ ಅವಧಿಯಷ್ಟಿದ್ದರೆ ಅವುಗಳನ್ನು ಭೂಸ್ಥಿರ ಉಪಗ್ರಹಗಳು ಎನ್ನುತ್ತಾರೆ. | 1 | |
| | | ಭೂಸ್ಥಿರ ಉಪಗ್ರಹಗಳು ಅಂತಾರಾಷ್ಟ್ರೀಯ ಸಂಪರ್ಕಕ್ಕೆ ಅಗತ್ಯವಿರುವ ಪ್ರಸಾರದ ಸೌಕರ್ಯಗಳನ್ನು ಒದಗಿಸುವುದರಿಂದ. ಈ ಉಪಗ್ರಹಗಳನ್ನು ಸ್ಥಾಪಿಸುವುದರಿಂದ ಭೂಮಿಯ ಯಾವುದೇ ಸ್ಥಳದಿಂದ ಇತರ ಯಾವುದೇ ಸ್ಥಳಕ್ಕೆ ಸಂಪರ್ಕ ಕಲ್ಪಿಸಬಹುದು. | 1 | 4 |